ದಣಿದ ಒಡಲಾಳದಿಂದ ನೋವಿನ ಸಮೇತ ಹೊರಬಂದ ಆ ಮಾತುಗಳನ್ನು ಕೇಳಿ ಬಹಳ ಖೇದವೆನಿಸಿತು. ಮಕ್ಕಳಾಗಿಲ್ಲ. ಮದುವೆಯೇ ಆಗಿಲ್ಲ. ಇಷ್ಟರಲ್ಲೇ 'ಗರ್ಭಕೋಶ' ಎನ್ನುವ ಅಷ್ಟು ದೊಡ್ಡ ಪದವನ್ನು ಎತ್ತಾಡುವಂತೆ ಮಾಡಿರುವ ಕಾಯಿಲೆ ಯಾವುದಿರಬಹುದು? ಕೇಳಬೇಕೆನಿಸಿದರೂ ಬಳಲಿ ಬಸವಳಿದವಳ ಬಳಿ ಬೇರೇನೂ ಕೇಳಲಾಗಲಿಲ್ಲ. ಹೆಗಲಿಗೆ ಒರಗಿ ಕಷ್ಟದಿಂದೆಂಬಂತೆ ಕಣ್ಮುಚ್ಚಿದವಳ ಮುಖ ಬಸ್ಸಿನ ಕುಲುಕಾಟಕ್ಕೆ ಹೆಗಲಿನಿಂದ ಜಾರಿಹೋಗದಂತೆ ಕೈ ಅಡ್ಡ ಇಟ್ಟೆ.

'ಇವಳಿಗೆ ಕೇಕೋಡರ ಮಗನಿಗಿಂತ ಶ್ರೀಮಂತನಾದ, ಶಾಸ್ತ್ರಿಗಳ ಮಗನಿಗಿಂತ ಸದ್ಗುಣನಾದ ವರ ದೊರಕಲಿ ದೇವರೇ...'

ಮನಸ್ಸು ಅಪ್ರಯತ್ನದಿಂದ ಹಾರೈಸಿತು. ನಿದ್ರೆಯೆಂಬುದು ಕಿಟಕಿಯಾಚೆಗಿನ ದೂರದ ಕತ್ತಲಿನ ಮಡುವಿನಲ್ಲಿ ಮುಳುಗಿ ಹೋಗಿರುವ ಬೀದಿದೀಪದಂತೆ ಕ್ಷೀಣವಾಯಿತು.

"ಹೆಣ್ಣುಮಕ್ಕಳ ಪ್ರಪಂಚದಲ್ಲಿ ನಿಮಗೆ ಅರ್ಥವಾಗದಂತಹಾ ಅದೆಷ್ಟೋ ಸೂಕ್ಷ್ಮ ಸಂಗತಿಗಳಿವೆ ವಿಹಾರ್..."

ಆ ಮಾತು ಅವಳ ನಿದ್ರೆಯ ಲೋಕದಿಂದಲೇ ಅನುರಣಿಸುತ್ತಿರುವಂತೆ ಭಾಸವಾಯಿತು. ಈ ಹೆಣ್ಣೆಂಬ ಜೀವಿಯೇ ಹೀಗೆ...

ತನಗಷ್ಟೇ ಸೀಮಿತವಾದ ಅದೆಷ್ಟೋ ಗುಟ್ಟು, ಸಂಗತಿ, ತುಮುಲಗಳನ್ನು ಒಳಗಿಟ್ಟುಕೊಂಡೇ ನಮ್ಮೊಂದಿಗೆ ಬೆರೆಯುತ್ತದೆ. ಇಷ್ಟು ದಿನ ಮದುವೆಯ ವಿಷಯದಲ್ಲಿವಳು ನಡೆದುಕೊಳ್ಳುತ್ತಿದ್ದ ರೀತಿಯನ್ನು ರೂಪ, ಹಣ, ಅಂತಸ್ತುಗಳ ಮೇಲಿನ ವ್ಯಾಮೋಹವೆಂದೇ ತಿಳಿದಿದ್ದೆ. ಅದರ ಹಿಂದೆ ಹೀಗೊಂದು ಸಂಕಟವಿದೆಯೆಂಬ

